ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ
ನ್ಯಾಯಾಧೀಶರ ನ್ಯಾಯಾಲಯ, ಹಾಸನ

ಸ್ಪೆಷಲ್ ಕೇಸ್ ನಂ:**756/2023**

| | | |
|---|---|---|
| | ಚಾಸಾಃ **25** | ಅಸಾಃ **24** |
| ಹೆಸರು | ವಿಶ್ವನಾಥ | |
| ತಂದೆಯ ಹೆಸರು **:** | ಕೃಷ್ಣ | |
| ವಯಸ್ಸು**:** | 38 ವರ್ಷ | |
| ಕೆಲಸಃ | ಚಾಲಕ (ಡಿ ವೈ ಎಸ್ ಪಿ ಕಛೇರಿ) | |
| ವಾಸಸ್ಥಳ | ಹಾಸನ | |

ದಿನಾಂಕಃ **23.04.2026** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ

1. ನಾನು ಕಳೆದ 3 ವರ್ಷದಿಂದ ಡಿ ವೈ ಎಸ್ ಪಿ ಹಾಸನ ರವರ ಕಛೇರಿಯಲ್ಲಿ ಜೀಪ್ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ 19.10.2023 ರಂದು ಬೆಳಗ್ಗೆ 11-45 ಗಂಟೆಗೆ ನಾನು ಡಿ ವೈ ಎಸ್ ಪಿ ಯವರ ಕೆಎ-13-ಜಿ 1462 ಮಹೇಂದ್ರ ಬುಲೇರೋ ಜೀಪ್ ನ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತೇನೆ. ಡಿ ವೈ ಎಸ್ ಪಿ ಯವರನ್ನು ಕರೆದುಕೊಂಡು ಬಡಾವಣೆ ಠಾಣೆಗೆ ಕರೆದುಕೊಂಡು ಹೋಗಿರುತೆತೇನೆ. ಠಾಣೆಯಲ್ಲಿ 1ನೇ ಆರೋಪಿಯವರು ನಮ್ಮ ಜೀಪ್ ನಲ್ಲಿ ಬಂದು ಕೃತ್ಯ ನಡೆದ ಸ್ಥಳ ಅರಸೀಕೆರೆ ರಸ್ತೆ ಬಿ ಕಾಟೀಹಳ್ಳಿ ಕೊಪ್ಪಲು ಸಿಮೆಂಟ್ ರಸ್ತೆ ಅಲ್ಲಿ ಒಂದು ಅಂಚಿನ ಮನೆ ತೋರಿಸಿರುತ್ತಾರೆ. ಅಲ್ಲಿ ನಾನು ವಾಹನವನ್ನು ನಿಲ್ಲಿಸಿರುತ್ತೇನೆ. ಅಲ್ಲಿ ಪೊಲೀಸರು ಮಧ್ಯಾಹ್ನ 12-00 ರಿಂದ 3-15 ರ ವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು: 3ನೇ ಆರೋಪಿ ಪರ ಶ್ರೀ ಎಂ ಎನ್ ಜೆ ವಕೀಲರಿಂದ:</u>

2. ನಾನು ತನಿಖಾಧಿಕಾರಿಯವರ ಜೊತೆ ಯಾವುದೇ ಪ್ರಕಟಣೆಯ ತನಿಖೆಗೆ ಹೋದರೆ ಹೋದ ಸಮಯವನ್ನು ಲಾಕ್ ಬುಕ್ ನಲ್ಲಿ ನಮೂದನೆ ಮಾಡುತ್ತೇನೆ ಎಂದರೆ ಸರಿ. ನಾನು ಆ ದಿವಸ ಹೋಗಿದ್ದ ಬಗ್ಗ ಲಾಕ್ ಬುಕ್ ನ ಪ್ರತಿಯನ್ನು ತನಿಖಾಧಿಕಾರಿಯವರಿಗೆ ಕೊಟ್ಟಿರುವುದಿಲ್ಲ. ತನಿಖಾಧಿಕಾರಿಯವರು 1ನೇ ಆರೋಪಿ ಯಾವ ಪ್ರಕರಣಕ್ಕೆ ಸಂಬಂಧಪಟ್ಟಿದ್ದಾರೆ ಎಂದು ತಿಳಿಸಿರುತ್ತಾರೆ. ನಮ್ಮ ಜೀಪ್ ನಲ್ಲಿ ಕುಂತಿರುವ ಇನ್ನಿಬ್ಬರು ವ್ಯಕ್ತಿಗಳು ಪಂಚ್ ಸಾಕ್ಷಿಗಳು ಅವರ ಹೆಸರು ಮತ್ತು ಅವರು ಯಾರು ಎಂದು ನನಗೆ ಗೊತ್ತಿರುವುದಿಲ್ಲ ತಿಳಿದುಕೊಳ್ಳಲು ಪ್ರಯತ್ನ ಮಾಡಿರುವುದಿಲ್ಲ. ಬಡಾವಣೆ ಪೊಲೀಸ್ ಠಾಣೆಯಿಂದ ಮಹಜರ್ ಜಾಗ ಒಂದೂವರೆ ಕಿ ಮೀ ಆಗುತ್ತದೆ. ಹಾಸನ-ಅರಸೀಕೆರೆ ಮುಖ್ಯ ರಸ್ತೆಯಿಂದ ಕೃತ್ಯ ನಡೆದಿದೆ ಎಂದು ಹೇಳಲಾದ ಸ್ಥಳ ಸುಮಾರು 75-100 ಮೀಟರ್ ಇರುತ್ತದೆ. 1ನೇ ಆರೋಪಿ ತೋರಿಸಿದೆ ಎಂದು ಹೇಳಲಾದ ಮನೆಯ ಜಾಗದ ಸುತ್ತಾಮುತ್ತಾ ವಾಸದ ಮನೆಗಳು ಇರುತ್ತವೆ ಎಂದರೆ ಸರಿ. ತನಿಖಾಧಿಕಾರಿಯವರು ಸುತ್ತಾಮುತ್ತಾ ಇದ್ದ ಜನರನ್ನು ಮಹಜರ್ ಗೆ ಕರೆದರೆ ಎಂದರೆ ನನಗೆ ಗೊತ್ತಿಲ್ಲ. ಮಹಜರ್ ಯಾರು ಯಾರು ಸಹಿ ಮಾಡಿದರು ನನಗೆ ಗೊತ್ತಿಲ್ಲ. ನಾನು ಡಿ ವೈ ಎಸ್ ಪಿ ಯವರನ್ನು ಮಹಜರ್ ಗೆ ಕರೆದುಕೊಂಡು ಹೋಗಿರುವುದಿಲ್ಲ. 1ನೇ ಆರೋಪಿ ನಾನು ಹೇಳಿದ ಹಾಗೆ ಜೀಪ್ ನಲ್ಲಿ ಬಂದಿರುವುದಿಲ್ಲ ಹಾಗೂ ಸ್ಥಳವನ್ನು ತೋರಿಸಿರುವುದಿಲ್ಲ ಠಾಣೆಯಲ್ಲಿ ಸೃಷ್ಟಿಸಿದ ಮಹಜರ್ ಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸ್ ಸಿಬ್ಬಂದಿಯವರು ಬೇರೆ ಜೀಪ್ ನಲ್ಲಿ ಬಡಾವಣೆ ಪೊಲಿಸ್ ಠಾಣೆಯ ಸಬ್ ಇನ್ಸ್ ಪೆಕ್ಟರ್ ಇನ್ನೊಂದು ಜೀಪ್ ನಲ್ಲಿ ಬಂದಿದ್ದರು ಅವರು ಯಾರು ಎಂದು ಹೇಳಲು ಆಗುವುದಿಲ್ಲ. ಹೋಗಿದ್ದ ಬಗ್ಗ ವಿಡಿಯೊ ಮಾಡಿದ್ದಾರೆ ಎಂದರೆ ನಾನು ಜೀಪ್ ನಲ್ಲಿ ಕುತಿಳಿದ್ದೆ. ಬಡಾವಣೆ ಪೋಲೀಸರು

ಅವತ್ತು ಯಾರು ಬಂದಿರುವುದಿಲ್ಲ. ಪೊಲೀಸರಿಗೆ ಬೆಂಬಲ ಕೊಡಲು ಬಂದಿದ್ದೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ **1,2** ಮತ್ತು **4**ನೇ ಆರೋಪಿ ಪರ ಶ್ರೀ ಎಂ ಕೆ ಪಿ ವಕೀಲರಿಂದಃ

3. ನನ್ನ ಪರವಾನಿಗೆಯನ್ನು ಐ ಓ ಗೆ ಕೊಟ್ಟಿರುವುದಿಲ್ಲ.

ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಗಿದೆ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರ.,

1ನೇ ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ